Steps taken to develop Hessarghatta Farm.

Q.—948. Sri R. MUNISWAMIAH (Bangalore North—Scheduled Castes).—

Will the Government be pleased to state :—

(*a*) the steps that they have taken for improving and developing the Hessarghatta Grass Farm ;

(*b*) whether a fishery section is attached to the Farm ;

(*c*) what are the species of fish that are reared there ;

(*d*) the number of ponies that are kept there ;

(*e*) the varieties of grass that are grown there ?

A.—Dr. R. NAGAN GOWDA (Minister for Agriculure).—

(*a*) Please see note in the Appendix.

(*b*) Yes.

(*c*) *vide* particulars noted below.

Sl. No.	*Variety of fish*	*Kannada Name*
1	Mirror Carp	ಕನ್ನಡಿ ಮೀನು.
2	Catla	ಕಾಟ್ಲ.
3	Gourami	ಗೌರಾಮಿ.
4	Etroplus	ಎಟ್ರೋಪ್ಲಸ್.
5	Labeo	ಮುಚ್ಚೆಲು.
6	Notopterus	ಚಪಾಳೆ.
7	Cirrhina	ಅರ್ಚ.
8	Loaches	ಮುಳ್ಳುಗಾತಿಯ ಮೀನುಗಳು.
9	Ophicephalus Marulius	ಹೂವು ಮೀನು.
10	Ophicephalus Striatus	ಕುಚ್ಚು.
11	Ophicephalus Penetatus	ಕೊರವ.
12	Barillius	ಅಗಸಗಿತ್ತಿ.
13	Barbus dubius	ಕೂರಲು.
14	Garra	ಕಲ್ಲು ಕೊರವ.
15	Barbus Carnaticus	ಗೆಂಡೆ.

(*d*) 157.

(*e*) (1) Kachikarda, (2) Maravalli (kaval lands).

Under irrigation :—Rhodes grass—Elephant grass and Cumbu grass.

In addition the following are grown for varietal and nutrition studies :—

1 Thin napier. 2 Guinea. 3 Pora. 4. Wooly finger. 5. Millet grass. 6. Molasses grass from Brazil. 7. Kikuya. 8. Gait Star. 9. Sudan grass. 10. Natal. 11. Kolkattai Coimbatore grass. 12. Kutzu.

NOTE.

The steps taken for improving and developing the Hessarghatta Grass Farm are envisaged under the activities embodied in the scheme of Composite Livestock Farm and Research Station sanctioned and implemented with effect from March, 1951. The activities are briefly as hereunder :—

(1) *Agriculture* :—With a view to making the Farm self-sufficient as regards feeds and fodders required for the several species of livestock maintained on the Farm the following extents of lands are being cultivated and maintained :—

(i) Area under irrigation (Grasses, lucern and paddy) ... 50 acres
(ii) Area under dry crops (Ragi and Jola) ... 160 ,,
(iii) Area maintained under pasture for grazing and collection of hay. 1,500

(2) The following feeds and fodders are being produced annually :—

(i) Ragi and paddy about ... ... 600 pallas
(ii) Silage ... ... 300 tons
(iii) Perennial grasses ... ... 800 tons
(iv) Kaval hay ... ... 400 tons

(3) *Livestock Section* :—Under livestock the following activities have been developed.—

(i) Hallikar Cattle Breeding Station :—This was implemented during 1952 and the present strength is given hereunder :—

Cows	...	82
Bulls	...	1
Heifers over 1 year	...	53
Bull calves do	...	22
Young calves both sex under 1 year	...	50
Total		208

(ii) Sindhi and Murrah Buffalo Dairy :—This was established during 1949 and the present strength is as follows :—

		Sindhi	*Murrah Buffaloes*
Cows	...	72	42
Bulls	...	3	1
Heifers over 1 year	...	58	19
Bull calves over 1 year	...	8	15
Young calves	...	32	9
Total		173	86

(iii) Dry Cattle Farm :—Present strength is furnished below :—

Cows	...	67
Buffaloes	...	20
Total		87

(iv) Pony Breeding :—Present strength is furnished below :—

Stallions	...	...	5
Brood mares	...	...	53
Young Stock	...	..	99
		Total ...	157

(v) The breeding of Remount horses for the use of the Military Department has since been wound up as there was no demand for them by the Indian Army.

(vi) Sheep Farm :—A sheep farm for improving the Bannur breed of mutton sheep and the Hassan breed of wooly sheep of the State has been established since 1951 and the present strength is as follows :—

		Bannur breed	*Hassan breed*
Rams	...	2	1
Ewes	...	104	47
Ram lambs	...	34	6
Ewe lambs	...	103	41
Total	...	243	95

(DR. R. NAGAN GOWDA.)

(vii) Poultry Development:—A Poultry Farm which made its humble beginning in 1949 has now been developed into what is considered to be one of the biggest farms in India with nearly 15 breds of exotic breeds most of which were imported from U.K., and U.S.A. by air as day old chicks. The present strength of the Farm is as follows:—

Hens ...	...	...	359
Cocks ...	...	...	232
Laying pullets	...	...	757
Non-laying pullets	...	...	224
Pullet chicks	...	...	317
Cockerel chicks	...	...	365
Unsexed chicks	...	...	5,182
	Total	...	7,436

(viii) Fisheries:—The fishery of the Hessarghatta lake is also being developed by stocking and exploitation.

ಶ್ರೀ ಆರ್. ಮುನಿಸ್ವಾಮಯ್ಯ.—ಇದರಲ್ಲಿ ಹಿಂದೂ ದೇಶದಲ್ಲಿ ಬೆಳೆಸುವ ಹುಲ್ಲು ಯಾವುದು ?

ಡಾ॥ ಆರ್. ನಾಗನಗೌಡ.—ಕಾಚಿಕಾರ್ಡ್, ಷಿಯರ್ ಗ್ರಾಸ್ ಇವು ಹಿಂದೂದೇಶದಲ್ಲೇ ಹುಟ್ಟಿ ಬೆಳೆದಿರತಕ್ಕುವು. ಹೆನರು ಮಾತ್ರ ಇಂಗ್ಲೀಷ್ ಹೆನರು, ಅಷ್ಟೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಮಾನುಗಳಲ್ಲಿ ಹೊರದೇಶದ ಮಾನುಗಳು ಯಾವುವು ?

ಡಾ॥ ಆರ್. ನಾಗನಗೌಡ.—ಎಲ್ಲಾ ತಿನ್ನುವುದಕ್ಕೆ ಬರುತ್ತವೆ. ಕನ್ನಡಿ ಮಾನು ಊಟಿಯಿಂದ ಬಂದಿದೆ, ಕಾಟ್ಲಾ ಮಾನು ಕಲ್ಕತ್ತಾದಿಂದ ಬಂದಿದೆ; ಆದರೆ ಈಗ ಬಹಳ ಪಾಪ್ಯುಲರ್ ಆಗಿವೆ. ಗೌರಾಮಿ ಮತ್ತು ಎಟೊಪ್ಲಸ್ ಈಗ ಮದ್ರಾಸಿನಿಂದ ಬರುತ್ತವೆ. ಇವು ಮದ್ರಾಸಿನಲ್ಲಿ ಬಹಳ ರುಚಿಕರವೆಂದು ಹೇಳುತ್ತಾರೆ. ಮಿಕ್ಕ ಎಲ್ಲಾ ಮಾನುಗಳೂ ಕಾವೇರಿ ನದಿಯಲ್ಲಿ ಸಿಕ್ಕುವ ಮಾನುಗಳೇ.

ಶ್ರೀ ಕೆ. ಎ. ಬೈರೇಗೌಡ.—ತಾವು ಅಧಿಕಾರ ಸ್ವೀಕಾರಮಾಡಿದಮೇಲೆ ಈ ಕ್ಷೇತ್ರಕ್ಕೆ ಭೇಟಿ ಕೊಟ್ಟಿರಾ ?

ಡಾ॥ ಆರ್. ನಾಗನಗೌಡ.—ಎರಡುಮೂರು ಸಾರಿ ಹೋಗಿ ನೋಡಿದ್ದೇನೆ

ಶ್ರೀ ಕೆ. ಎ. ಬೈರೇಗೌಡ.—ಈ ಫಾರಮ್ಮನ್ನು ಅಭಿವೃದ್ಧಿ ಪಡಿಸುವುದಕ್ಕೆ ತಾವೇನಾದರೂ ಸಲಹೆಗಳನ್ನು ಕೊಟ್ಟಿದ್ದೀರಾ ?

ಡಾ॥ ಆರ್. ನಾಗನಗೌಡ.—ಕೆಲವು ಲೈನುಗಳಲ್ಲಿ ಇದನ್ನು ಚೆನ್ನಾಗಿ ಮಾಡಬೇಕೆಂದು ಅದುಕೊಂಡಿದ್ದೇವೆ.

ಶ್ರೀ ಕೆ. ಎ. ಬೈರೇಗೌಡ.—ಇಲ್ಲಿರತಕ್ಕ ನುಮಾರು 2-3 ಸಾವಿರ ಎಕರೆ ಪ್ರದೇಶದಲ್ಲಿ ನುಮಾರು ಅರ್ಧ ಭಾಗದಷ್ಟು ಎಂದರೆ 1,500 ಎಕರೆಗಳನ್ನು ಸಾಗುವಳಿಗೆ ತರುವ ಬದಲು ಇಷ್ಟೊಂದು ದೊಡ್ಡ ಹುಲ್ಲುಗಾವಲನ್ನಾಗಿ ಬಿಡಲು ಕಾರಣವೇನು ?

ಡಾ॥ ಆರ್. ನಾಗನಗೌಡ.—ದನಗಳನ್ನು ಮೇಯಿಸುವುದಕ್ಕೆ ಎಂದು ಬಿಟ್ಟುಕೊಂಡಿದ್ದೇವೆ. ಅವು ಓಡಾಡಿಕೊಂಡು ಬರಲಿಕ್ಕೆ ಅಷ್ಟು ಪ್ರದೇಶ ಬೇಕು. ದನಗಳು ಹಾಗೆ ತಿರುಗಾಡುತ್ತಿದ್ದರೆ ಕಾಲು ಗಂಟಿಕ್ಕಿಕೊಳ್ಳುವುದಿಲ್ಲ.

ಶ್ರೀ ಕೆ. ಎ. ಬೈರೇಗೌಡ.—ದನಗಳು ಓಡಾಡುವುದ ಕ್ಕೋಸ್ಕರವೇ ಇಷ್ಟೊಂದು ಜಾಗ ಬೇಕೇ ?

ಡಾ॥ ಆರ್. ನಾಗನಗೌಡ.—ದನಗಳು ಓಡಾಡಿಕೊಂಡು ಬರಲು ಅಷ್ಟು ಜಾಗ ಬೇಕೇ ಬೇಕು ಅವು ಅಡ್ಡಾಡಿಕೊಂಡು ಬಂದರೆ ಚೆನ್ನಾಗಿ ಕಾಣುತ್ತವೆ. ಅವು ಚೆನ್ನಾಗಿ ಕಾಲಾಡಿಕೊಂಡು ಬರಬೇಕಾಗಿದ್ದರೆ ಜಾಗ ಸ್ವಲ್ಪ ಹೆಚ್ಚಾಗಿಯೇ ಇರಬೇಕು. ಇದೂ ಅಲ್ಲದೆ ಅಲ್ಲಿ ಕುದುರೆಗಳವೆ, ಕುರಿಗಳಿವೆ, ಕೋಳಿಗಳಿವೆ. ಇವುಗಳೆಲ್ಲಾ ಒಂದೇಕಡೆಯಲ್ಲಿ ಮೇಯುವುದಕ್ಕಾಗುವುದಿಲ್ಲ.

ಶ್ರೀ ಕೆ. ಎ. ಬೈರೇಗೌಡ.—ಈ ಫಾರಮ್ಮನ್ನು ಇನ್ನೂ ಹೆಚ್ಚು ಅಭಿವೃದ್ಧಿಗೆ ತರಲು ಹೆಚ್ಚುಹೆಚ್ಚಾಗಿ ಭೂಮಿಯನ್ನು ಸಾಗುವಳಿಗೆ ತರಬೇಕೆಂದು ನಲಹೆಗಳನ್ನು ಮಾಡಿರಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಆ ಸಾಗುವಳಿಯ ವಿಚಾರವನ್ನ ಗಮನಕ್ಕೆ ಬಂದಿಲ್ಲ. ತಾವು ಸಾಗುವಳಿಯ ವಿಚಾರವನ್ನು ಗಮನದಲ್ಲಿಟ್ಟು ಪ್ರಶ್ನೆ ಕೇಳುತ್ತಿದ್ದೀರಿ; ಆದರೆ ಹುಲ್ಲುಗಾವಲಿನ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ. ಅಲ್ಲಿ ನಾವು ಈಗ ಒಳ್ಳೆಯ ಉತ್ಪಮತರದ ದನಗಳನ್ನೂ ಕೋಳಿಗಳನ್ನೂ ಮತ್ತು ಕುರಿಗಳನ್ನೂ ಸಹ ಸಾಕುತ್ತಿದ್ದೇವೆ. ಹಳ್ಳಿಕಾರ್ ಜಾತಿಯ ಹೋರಿಗಳು—ಜಾನುವಾರುಗಳನ್ನೂ ಮತ್ತು ಸಿಂಧಿ-ಮುರಾ ಜಾತಿಯ ಹಸು ಮತ್ತು ಎಮ್ಮೆಗಳನ್ನೂ ಸಾಕುತ್ತಿದ್ದೇವೆ.

ಶ್ರೀ ಕೆ. ಎ. ಬೈರೇಗೌಡ.—ಈ ಹಿಂದೆ ಈ ಜಮೀನುಗಳನ್ನು ಹೆಚ್ಚು ಸಾಗುವಳಿಮಾಡಬೇಕೆಂಬ ವಿಚಾರ ಬಂದಿದ್ದಾಗ್ಗೆ ಟ್ರ್ಯಾಕ್ಟರ್ ಇತ್ಯಾದಿ ವ್ಯವಸಾಯಕ್ಕೆ ಸಂಬಂಧಪಟ್ಟ ಸಲಕರಣೆಗಳಿಲ್ಲದೆ ಅವನ್ನು ವ್ಯವಸಾಯಕ್ಕೆ ತರಲು ಸಾಧ್ಯವಾಗಲಿಲ್ಲ ಎಂದು ತಿಳಿಸಿದ್ದುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎ. ಬೈರೇಗೌಡ.—ತಾವು ಅಲ್ಲಗೆ ಹೋಗಿದ್ದಾಗ ಅದನ್ನು ನೋಡಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಆ ಸಂದರ್ಭದಲ್ಲಿ ಅದನ್ನೆಲ್ಲಾ ನೋಡತಕ್ಕಂಥ ಅಗತ್ಯವಾಗಲಿ ಅಥವಾ ಅವಕಾಶವಾಗಲಿ ಇರಲಿಲ್ಲ. ಅದನ್ನು ನಾವು ಒಂದು ಎಕನಾಮಿಕಲ್ ಆಗಿ ರನ್‌ಮಾಡಬೇಕೆಂದಿದ್ದೇವೆ.

ತಾವು ಟ್ರ್ಯಾಕ್ಟರನ್ನು ಉಪಯೋಗವಾಡಬೇಕೆಂದು ಹೇಳಿದಾಗ್ಗೂ ನಾವು ಅಲ್ಲಿ ಯಾವುದು ಎಕನಾಮಿಕ್ ಆಗಿ ಇದೆಯೋ ಅದನ್ನು ನೋಡಿಕೊಂಡು ನಾವು ಕೆಲಸ ಮಾಡುತ್ತಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಆ ಫಾರಂನಲ್ಲಿ ಕುದುರೆಗಳು ಎಷ್ಟಿವೆ?

ಡಾ॥ ಆರ್. ನಾಗನಗೌಡ.—ಸುಮಾರು 157 ಕುದುರೆಗಳಿವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವು ಅಲ್ಲಿ ಈ ಕುದುರೆಗಳ ಮಾರಾಟವನ್ನೂ ಮಾಡುತ್ತಿದ್ದೀರೋ?

ಡಾ॥ ಆರ್. ನಾಗನಗೌಡ.—ಮಾರಾಟ ಮಾಡ ತಕ್ಕಂಥ ಕುದುರೆಗಳೆಲ್ಲಾ ಈಗ ಏಲೇವಾರಿ ಆಗಿಹೋ ಗಿರುತ್ತವೆ.

ಶ್ರೀ ಕೊಟ್ರು ಬಸವನಗೌಡ.—ಈಗ ತಾವು ಅಲ್ಲಿ ಸೂಚಿಸಿರತಕ್ಕ ಯಾವಯಾವ ಜಾತಿ ಮಾನುಗಳಲ್ಲಿ ಎಷ್ಟೆಷ್ಟು ವಿಟಮಿನ್‌ಗಳಿರುತ್ತವೆಯೆಂಬುದನ್ನು ಹೇಳು ವುದಕ್ಕಾಗುತ್ತದೆಯೇ?

ಡಾ॥ ಆರ್. ನಾಗನಗೌಡ.—ಈ ವಿಟಮಿನ್ ಕೆಲವು ಜಾತಿ ಮಾನುಗಳಲ್ಲಿ ಹೆಚ್ಚಾಗಿರುತ್ತದೆ, ಕೆಲವುಜಾತಿ ಮಾನುಗಳಲ್ಲಿ ಕಡಮೆಯಾಗಿರುತ್ತದೆ. ಆದರೆ ಅದನ್ನೇ ತಿಂದು ಅನುಭವಿಸತಕ್ಕಂಥವರಿಗೇ ಆ ಭಾಗ್ಯವಿರು ವುದು.

ಶ್ರೀ ಏ. ಮಸಿಯಪ್ಪ.—ನಮ್ಮ ದೇಶದ ರಾನುಗಳಿಗೆ ಸೂಚಾಗತಕ್ಕಂಥ ಯಾವುದಾದರೂ ಹುಲ್ಲನ್ನು ತಾವು ಈಗ ಇಪಾರ್ಟ್ ಮಾಡುತ್ತಿದ್ದೀರಾ?

ಡಾ॥ ಆರ್. ನಾಗನಗೌಡ.—ಈಗ ನಾವು ಪರೀಕ್ಷೆ ಮಾಡುತ್ತಿರುವಂಥ ಹುಲ್ಲುಗಳ ಪೈಕಿ ಗಿನೀ ಗ್ರಾಸ್ ಎಂಬುದು ನಮ್ಮ ದೇಶದ ಜಾನುವಾರುಗಳಿಗೆ ಬಹಳ ನೂಟಬಲ್ ಆಗಿದೆ. ಆದರೆ ಸ್ವಲ್ಪ ಇರಿಗೇಷ್ ಮಾಡಿ ದರೆ ಈ ಹುಲ್ಲು ಇನ್ನೂ ಚೆನ್ನಾಗಿ ಬೆಳೆಯುತ್ತದೆ.

ಶ್ರೀ ಏ. ಮಸಿಯಪ್ಪ.—ರೈತಾಪಿವರ್ಗಕ್ಕೆ ಇದ ನ್ನೆಲ್ಲಾ ಹೆಚ್ಚಾಗಿ ಪ್ರಚಾರಮಾಡಲು ತಾವು ಸಾಕಷ್ಟು ಪ್ರಯತ್ನಗಳನ್ನೇನಾದರೂ ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಅದನ್ನು ಇನ್ನೂ ಮಾಡಬೇಕಾಗಿದೆ.

ಶ್ರೀ ಏ. ಮಸಿಯಪ್ಪ.—ಈಗ ಅಲ್ಲಿರತಕ್ಕ ಫ್ರೂಟ್ಸ್ ರಿಸರ್ಚ್ ಸ್ಟೇಷನ್ನು ಅದೊಂದು ರಿಸರ್ಚ್ ಸ್ಟೇಷನ್ ಎಂದು ಕರೆಯುವುದಕ್ಕೆ ಯೋಗ್ಯವಾದ ರೀತಿಯಲ್ಲಿ ಇದೆಯೇ?

ಡಾ॥ ಆರ್. ನಾಗನಗೌಡ.—ಹಾಗೆ ಕರೆಯುವು ದಕ್ಕೆ ಸಾಧ್ಯವಾಗುತ್ತದೆ. ನಾವು ಮೊದಲು ಆಪಲ್ಸ್ ವಿಚಾರದಲ್ಲಿ ರಿಸರ್ಚ್ ಮಾಡಬೇಕೆಂದು ಅದನ್ನು ಪ್ರಾರಂಭಮಾಡಿದೆವು. ಈಗ ಅದು ಮುಕ್ತಾಯ ವಾಗುತ್ತಾಬರುತ್ತಿದೆ. ಇನ್ನುಮೇಲೆ ನಮ್ಮ ದೇಶದಲ್ಲಿ ರತಕ್ಕ ಇತರ ಹಣ್ಣುಹಂಪಲುಗಳ ವಿಚಾರವಾಗಿ ರಿಸರ್ಚ್ ಮಾಡಬೇಕು ಎಂದು ನಾವು ಅಂದುಕೊಂ ಡಿದ್ದೇವೆ.

ಶ್ರೀ ಏ. ಮಸಿಯಪ್ಪ.—ಆ ರಿಸರ್ಚ್ ವರ್ಕ್ ಈಗಲೂ ಇನ್ನೂ ನಡೆಯುತ್ತಲೇ ಇದೆಯೇ?

ಡಾ॥ ಆರ್. ನಾಗನಗೌಡ.—ಈಗ ನಾವು ಆ ಬಗ್ಗೆ ಸ್ಕೀಮುಗಳನ್ನ ಇನ್ನೂ ತಯಾರುಮಾಡಬೇಕಾಗಿದೆ.

Sri V. M. MASCARENHAS.—What is the average output of eggs, Sir, in this farm?

Dr. R. NAGAN GOWDA.—I think we produce in all 1,20,000 eggs per year on an average for 8 or 10 months. So, you can take it that we produce 10,000 every month on an average.

Sri V. M. MASCARENHAS.—Is there any prospect of increasing the output since Bangalore itself is eating about 20,000 eggs a day?

Dr. R. NAGAN GOWDA.—That is right. I think we should try to increase. But we are not getting our cost of production by the sale of eggs in Bangalore and so we are not anxious to supply eating eggs to Bangalore. The object of this farm is to produce eggs for hatching purposes and we want to develop in that line. As it is, we are selling about 75,000 or 80,000 eggs in Bangalore.

ಶ್ರೀ ಬಿ. ಚಿಕ್ಕಣ್ಣ.—ಈಗ ಆ ಫಾರಂನಲ್ಲಿ ಖಾಸಗೀ ರಾಸುಗಳನ್ನು ಮೇಯಿಸಲಿಕ್ಕೆ ಅವಕಾಶವಿದೆಯೇ?

ಡಾ। ಆರ್. ನಾಗನಗೌಡ.—ಹಾಲು ಕರೆಯು ವುದು ನಿಂತು ಹೋಗಿರತಕ್ಕಂಥ ರಾನುಗಳನ್ನು ಅಲ್ಲಿ ಟ್ಟುಕೊಳ್ಳುವುದಕ್ಕೆ ಈಗ ಅವಕಾಶ ಮಾಡಿಕೊಟ್ಟಿ ದ್ದೇವೆ. ಈ ವಿಚಾರ ಈಗ ಬಹಳ ಲಾಭದಾಯಕ ವಾಗಿದೆ.

ಶ್ರೀ ಬಿ. ಚಿಕ್ಕಣ್ಣ.—ಈಗ ಅಲ್ಲಿ ಒಂದು ತಿಂಗಳಿಗೆ ಒಂದು ರಾಸಿಗೆ ಏನು ಛಾರ್ಜುಮಾಡುತ್ತೀರಿ?

ಡಾ। ಆರ್. ನಾಗನಗೌಡ.—ಒಂದು ರಾಸಿಗೆ ಒಂದು ತಿಂಗಳಿಗೆ 8 ರೂಪಾಯಿಗಳನ್ನು ಛಾರ್ಜು ಮಾಡುತ್ತಿದ್ದೇವೆ ಈಗ.

ಶ್ರೀ ಬಿ. ಚಿಕ್ಕಣ್ಣ.—ತಾವು ಹಾಗೆ ಈಗ ನಿರ್ಧರಿಸಿ ರುವ ಛಾರ್ಜು ಬಹಳ ಜಾಸ್ತಿ ಆಗಲಿಲ್ಲವೇ?

ಡಾ। ಆರ್. ನಾಗನಗೌಡ.—ಇದೇ ಬಹಳ ಕಡಮೆ ಆಗಿದೆ ಎಂದು ನನ್ನ ಅಭಿಪ್ರಾಯ. ಕರೆಯುತ್ತಿದ್ದಂಥ ರಾಸುಗಳು ಕರಾವನ್ನು ನಿಲ್ಲಿಸಬಿಟ್ಟಮೇಲೆ ಜನರು ಅವುಗಳನ್ನು ಸಿಕ್ಕಾಪಟ್ಟೆ ಖರೀದಿಗೆ ಮಾರಾಟಮಾಡಿ ಬಿಡುತ್ತಾರೆ. ಅದರಿಂದ ಬಹಳ ಅನ್ಯಾಕ್ರಾಂತಗಳಾ ಗುತ್ತವೆ. ಅಂಥಾದ್ದನ್ನೆಲ್ಲಾ ತಡೆಗಟ್ಟಬೇಕೆಂಬ ಉದ್ದೇಶದಿಂದ ಹೀಗೊಂದು ಕಡಮೆ ಬೆಲೆಗೆ ಕೊಟ್ಟಿ ದ್ದೇವೆಯೇ ಹೊರತು ಲಾಭ ಹೊಂದಬೇಕೆಂಬ ದೃಷ್ಟಿ ಯೇನೂ ಇದರಲ್ಲಿ ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಈಗ ಈ ಡೈರಿ ಫಾರಂ ಲಾಭದಾಯಕವಾಗಿದೆಯೇ?

ಡಾ। ಆರ್. ನಾಗನಗೌಡ.—ಇನ್ನೂ ಹಾಗೆ ಬಂದಿ ರಲಿಕ್ಕಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಈ ಫಾರಂನ್ನು ಸ್ಥಾಪನೆ ಮಾಡಿ ಇಲ್ಲಿಗಾಗಲೇ 5 ವರ್ಷಗಳ ಮೇಲಾಗಲಿಲ್ಲವೇ? ಇದನ್ನು ಉತ್ತಮಪಡಿಸಲು ಮತ್ತು ಇದರಲ್ಲಿರತಕ್ಕ ಕುಂದುಕೊರತೆಗಳನ್ನು ಪರಿಹಾರ ಮಾಡಲು ತಾವೇನು ಪ್ರಯತ್ನಗಳನ್ನು ಮಾಡಿದ್ದೀರಿ?

ಡಾ। ಆರ್. ನಾಗನಗೌಡ.—ಇನ್ನೂ ಹೆಚ್ಚು ಹೆಚ್ಚಾಗಿ ಹೈ ಮಿಲ್ಕ್ ಈಲ್ಡಿಂಗ್ ಹಸುಗಳನ್ನೂ ಎಮ್ಮೆಗಳನ್ನೂ ಇಡಬೇಕೆಂದು ಮಾಡಿದ್ದೇವೆ. ಸಿಂಧೀ ಜಾತಿಯ ಹಸುಗಳನ್ನೂ ಮತ್ತು ಎಮ್ಮೆಗಳನ್ನೂ ಸಾಕುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದನ್ನು ಒಂದು ಎಕನಾಮಿಕಲ್ ಆಗಿ ರನ್ ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈಗ ತಾವು ಅಲ್ಲಿ ಬೆಳೆಯಲಾಗುತ್ತಿರುವ ರಾಗಿ ಮತ್ತು ಭತ್ತ ಅಲ್ಲಿಗೆ ಮೇಲಿಗೆ ಸರಿಯಾಗಿ ಸಾಕಾಗುವಷ್ಟಾದರೂ ಬೆಳೆಯಲಾಗುತ್ತಿದೆಯೋ ಅಥವಾ ಇನ್ನೂ ಅಲ್ಲಿಗೆ ನರಬರಾಯಿ ಆಗಬೇಕಾಗುತ್ತದೆಯೋ ?

ಡಾ। ಆರ್. ನಾಗನಗೌಡ —ನೋಟೀಸ್.

ಶ್ರೀ ಬಿ. ಹುಚ್ಚೇಗೌಡ.—ಅಲ್ಲಿ ಈ ಸಲ 600 ಪಲ್ಲ ರಾಗಿಯನ್ನು ಬೆಳೆಯಲಾಯಿತೆಂದು ಹೇಳೋಣವಾಯಿತು. ಆ ರಾಗಿಯನ್ನೆಲ್ಲಾ ಏನುಮಾಡಿದಿರಿ ?

ಅಧ್ಯಕ್ಷರು.—ಅದನ್ನೆಲ್ಲಾ ಹೇಗೆ ಹೇಳುವುದಕ್ಕಾಗುತ್ತದೆ ? ಹಾಗೊಂದುವೇಳೆ ಉಳಿದಿದ್ದರೆ ಅದನ್ನು ಮಾರಾಟಮಾಡಿರುತ್ತಾರೆ.

ಶ್ರೀ ಬಿ. ಹುಚ್ಚೇಗೌಡ.—ನನಗೀಗ ಬೇಕಾಗಿರುವುದು : whether the quantity that is grown there is sufficient or not for that farm.

ಡಾ। ಆರ್. ನಾಗನಗೌಡ.—ಕೆಲವು ಭಾಗವನ್ನು ಅಲ್ಲಿರತಕ್ಕ ಕೋಳಿಗಳಿಗಾಗಿ ಉಪಯೋಗಿಸುತ್ತೇವೆ. ಮಿಕ್ಕಿದ್ದನ್ನು ಮಾರಾಟಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಹ್ಯಾಚ್ ಆಗದ ಕೋಳಿ ಮೊಟ್ಟೆಗಳನ್ನು ತಾವು ಹೊರಗಡೆಗೆ ಯಾವ ರೀತಿ ಎಂದರೆ ಯಾವ ರೇಟಿಗೆ ಮಾರಾಟಮಾಡುತ್ತಿದ್ದೀರಿ ?

ಡಾ। ಆರ್. ನಾಗನಗೌಡ.—5 ರೂಪಾಯಿ ಪ್ರಕಾರ ಕೊಡುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಆ ರೇಟು ಬಹಳ ಜಾಸ್ತಿ ಆಗಲಿಲ್ಲವೇ ?

ಅಧ್ಯಕ್ಷರು.—ಅಲ್ಲಿಗೂ ಸಹ ಗಿಟ್ಟುವುದಿಲ್ಲವೆಂದು ಹೇಳುತ್ತಿದ್ದಾರೆ.

ಡಾ। ಆರ್. ನಾಗನಗೌಡ.—ಇವುಗಳನ್ನು ಬಹಳ ಚೀಪಾದ ರೇಟಿನಲ್ಲಿ ಒದಗಿಸಲು ಬಹಳ ಎಕನಾಮಿಕಲ್ ರೀತಿಯಾಗಿ ಉತ್ಪತ್ತಿ ಮಾಡಲು ಅವುಗಳ cost of production ಇನ್ನೂ ಕಡಮೆ ಮಾಡಬೇಕೆಂದು ಹಾಗೆ ಪ್ರಯತ್ನಪಡುವಂತೆ ತಿಳಿಸಲಾಗಿದೆ. ಈಗ ನಮ್ಮ cost of production ಹೇಗೋ ಹಾಗೆ ಮಾರಾಟ ಮಾಡುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಕೋಳಿಗಳಿಗೆ ಒಂದಕ್ಕೆ ಎಷ್ಟು ಖರ್ಚು ಬರುತ್ತೆ ?

ಡಾ। ಆರ್. ನಾಗನಗೌಡ.—ಒಂದು ತಿಂಗಳಿಗೆ ಒಂದು ಕೋಳಿಗೆ 1 ರೂಪಾಯಿ ಖರ್ಚು ಬರುತ್ತದೆಯೆಂದು ನಾವು ಲೆಕ್ಕಹಾಕಿದ್ದೇವೆ. ಒಂದು ದಿವಸಕ್ಕೆ ಒಂದು ಮರಿ ಹಾಕತಕ್ಕಂಥ ಕೋಳಿಗೆ ಖರ್ಚು ಸ್ವಲ್ಪ ಜಾಸ್ತಿ ಬರುತ್ತದೆ. ತಿಂಗಳಿಗೊಂದುಸಾರ್ತಿ ಮಾರಿ ಹಾಕುವ ಕೋಳಿಗೆ ಖರ್ಚು ಸ್ವಲ್ಪ ಕಡಮೆ ಆಗುತ್ತದೆ. ಆದರೆ ಹೆಣ್ಣು ಕೋಳಿಗಳಿಗೆ ಡಿಮ್ಯಾಂಡ್ ಇರುವಹಾಗೆ ಹುಂಜಗಳಿಗೆ ಡಿಮ್ಯಾಂಡಿರುವುದಿಲ್ಲ.

9 A.M.

ಶ್ರೀ ಬಿ. ಹುಚ್ಚೇಗೌಡ.—ಸಾಕುವವರಿಗೆ ಕೊಡುವ ದರಲ್ಲಿ ಸ್ವಲ್ಪ ರಿಯಾಯಿತಿಯ ಮೇರೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೇ ?

ಅಧ್ಯಕ್ಷರು.—ಹೇಳಿದರಲ್ಲಾ, ಸಬ್ಸಿಡೈಸ್ ಮಾಡಿ ಕೊಡುತ್ತೇವೆ ಎಂದು.

Sri M. PALANIYAPPAN.—Has it come to the notice of Government that no good table fowls are supplied here ?

Dr. R. NAGAN GOWDA.—Excellent table eggs are being supplied.

Sri M. PALANIYAPPAN.—Table fowls.

Dr. R. NAGAN GOWDA.—Yes, we are supplying some fowls for the table though it is not our object to do so because all the breeds that we have are imported and better ones. So we are anxious to sell them only for breeding purposes. It is not our intention to sell them for table purposes. We have a scheme by which we exchange our cockerels for the country cockerels with out extra price.

Supply of Bull-dozer to Sri Doddaningappa

Q.—898. Sri B. C. NANJUNDIAH (Kora).—

Will the Government be pleased to state :—

(*a*) whether it is a fact that Sri Doddaningappa of Marganahally in Bukkapatna hobli, Sira taluk, has deposited Rs. 850 in the Agricultural department for the services of a bull-dozer for his lands ;

(*b*) the dates on which he deposited the amount ;

(*c*) whether the services of the bull-dozer is given to the applicant ;

(*d*) if so, when ;

(*e*) if not, the reason for the same ?

A.—Dr. R. NAGAN GOWDA (Minister for Agriculture).—

(*a*) Sri Doddalingappa deposited a sum of Rs. 825.

(*b*) 20th December 1951...Rs. 300
23rd December 1951...Rs. 300
12th January 1952 ...Rs. 225

Rs. 825

(*c*) Yes.

(*d*) February 1952.

(*e*) Does not arise in view of reply to clause (*c*).

ಶ್ರೀ ಬಿ. ಸಿ. ನಂಜುಂಡಯ್ಯ.—(d) ಪ್ರಶ್ನೆಗೆ ಉತ್ತರವಾಗಿ, 1952ನೆಯ ಇಸವಿ ಫೆಬ್ರವರಿ ತಿಂಗಳಿನಲ್ಲಿ ಒದಗಿಸಲಾಯಿತೆಂದು ಹೇಳಿದ್ದೀರಿ. ಎಷ್ಟು ದಿವಸ ಆ ಬುಲ್‌ಡೋಸರು ಕೆಲಸಮಾಡಿದೆ ?

ಡಾ॥ ಆರ್. ನಾಗನಗೌಡ.—ಕೆಲವು ದಿವಸ ಮಾತ್ರವೇ ಮಾಡಿದೆಯೆಂದು ಜ್ಞಾಪಕವಿದೆ. 30-31 ದಿವಸ ಕೆಲಸಮಾಡಿದೆಯೆಂದು ಕಾಣುತ್ತದೆ.